# <u>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:: ಕೇಂದ್ರ ಕಛೇರಿ:: ಬೆಂಗಳೂರು-27</u>

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ) ರ ಕಛೇರಿ, ಬೆ.ಮ.ಸಾ.ಸಂ ಕೇಂದ್ರ ಕಛೇರಿ, 2ನೇ ಮಹಡಿ, ಸಂಚಾರ ವಾಣಿಜ್ಯ ಶಾಖೆ,

ಬೆಂಗಳೂರು - 27. 080-22537575

**ಸಂ/ಬೆಂಮಸಾಸಂ/ಕೇಕ/ಸಂಚಾರ/ವಾಣಿಜ್ಯ/ಜಾಹೀರಾತು/ 1847 /2014-15 ದಿ: 24.07.2014**

***<u>ಮುಕ್ತ ಕಾರ್ಯ ಯೋಜನೆ ಸುತ್ತೋಲೆ ಸಂಖ್ಯೆ:01/2014-15</u>***

**ವಿಷಯ: "ಮುಕ್ತ ಕಾರ್ಯ ಯೋಜನೆ" ಯ ಅಡಿಯಲ್ಲಿ ಕವಚದ ಮೇಲೆ ಮಾತ್ರ ಜಾಹೀರಾತು ಪ್ರದರ್ಶಿಸಲು 200 ವಜ್ರ ವೊಲ್ವೋ (ನಗರ) ಬಸ್ಸುಗಳನ್ನು ಹಂಚಿಕೆ ಮಾಡುವ ಬಗ್ಗೆ:**

**ಉಲ್ಲೇಖ: "ಮುಕ್ತ ಕಾರ್ಯ ಯೋಜನೆ" ಸುತ್ತೋಲೆ ಸಂಖ್ಯೆ -02/2010-11 ದಿನಾಂಕ:02.06.2010.**

*~*~*~*~*

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕೆಳಕಂಡ ನಿಗದಿತ ದರ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು "ಮುಕ್ತ ಕಾರ್ಯ ಯೋಜನೆ" (ಟೆಂಡರ್ ರಹಿತ ನೇರ ಹಂಚಿಕೆ) ಯ ಅಡಿಯಲ್ಲಿ ಕವಚದ ಮೇಲೆ ಮಾತ್ರ ಜಾಹೀರಾತು ಪ್ರದರ್ಶಿಸಲು 200 ವಜ್ರ ವೊಲ್ವೋ (ನಗರ) ಬಸ್ಸುಗಳನ್ನು ಆಸಕ್ತ ವ್ಯಕ್ತಿ/ ಏಜೆನ್ಸಿ/ ಕಂಪನಿಗಳಿಗೆ ಜಾಹೀರಾತು ಪ್ರದರ್ಶಿಸಲು ಹಂಚಿಕೆ ಮಾಡುವಂತಿರುತ್ತದೆ.**

1. ಪ್ರತಿ ಬಸ್ಸಿಗೆ ರೂ.32,500/- ಗಳನ್ನು ಮಾಸಿಕ ಪರವಾನಗಿ ಶುಲ್ಕ/ ಬಾಡಿಗೆ/ ಜಾಹೀರಾತು ಶುಲ್ಕವಾಗಿ ನಿಗದಿಪಡಿಲಾಗಿದೆ.
2. ಒಮ್ಮೆಗೆ ಒಂದು ತಿಂಗಳಿಗೆ 10 ಬಸ್ಸುಗಳಿಗಿಂತ ಹೆಚ್ಚು ಬಸ್ಸುಗಳನ್ನು ಬುಕ್ಕಿಂಗ್ ಮಾಡಿದ್ದಲ್ಲಿ ಪ್ರತಿ ಬಸ್ಸಿಗೆ ಮಾಸಿಕ ರೂ.2500/- ರಂತೆ ರಿಯಾಯಿತಿ ಇರುತ್ತದೆ.
3. <u>ಕನಿಷ್ಟ ಜಾಹೀರಾತು ವಿಸ್ತೀರ್ಣ</u>: ವಾಹನದ ಕವಚದ ಮೇಲೆ ಜಾಹೀರಾತು ಪ್ರದರ್ಶಿಸಲು ಲಭ್ಯವಿರುವ ಒಟ್ಟು ಜಾಹೀರಾತು ವಿಸ್ತೀರ್ಣವು 400 ಚ.ಅಡಿ ( 37.16 ಚ.ಮೀ) ಒಳಗೊಂಡಿರುತ್ತದೆ.
4. <u>ಕನಿಷ್ಟ ಜಾಹೀರಾತು ಅವಧಿ:</u> ಕನಿಷ್ಟ ಒಂದು ತಿಂಗಳು. ಅದಕ್ಕಿಂತ ಹೆಚ್ಚುವರಿ ಅವಧಿಗೆ ಆ ಪ್ರಮಾಣದಲ್ಲಿ ಪರವಾನಗಿ ಶುಲ್ಕ ವಿಧಿಸಲಾಗುವುದು.
5. ಒಮ್ಮೆಗೆ ಒಬ್ಬ ವ್ಯಕ್ತಿ/ ಏಜೆನ್ಸಿಗೆ ಗರಿಷ್ಟ 75 ಬಸ್ಸುಗಳನ್ನು ಮಾತ್ರ ಹಂಚಿಕೆ ಮಾಡಲಾಗುವುದು.

6. <u>ತೆರವುಗೊಳಿಸುವ ವೆಚ್ಚ:</u> ಪ್ರತಿ ಬಸ್ಸಿಗೆ ರೂ.3000/-. ಜಾಹೀರಾತು ಪ್ರದರ್ಶಿಸಲು ನೀಡಿರುವ ಅನುಮತಿ ಅವಧಿ ಮುಗಿದ ನಂತರ ಏಜನ್ಸಿದಾರರೆ ಜಾಹೀರಾತುಗಳನ್ನು ಸಮರ್ಪಕವಾಗಿ ತೆಗೆದುಹಾಕಿದಲ್ಲಿ ಸಂಬಂಧಪಟ್ಟ ಘಟಕ ವ್ಯವಸ್ಥಾಪಕರಿಂದ ಧೃಡೀಕರಣ ಪತ್ರವನ್ನು ಸ್ವೀಕರಿಸಿದ ನಂತರ ಸದರಿ ಮೊತ್ತವನ್ನು ಮರುಪಾವತಿ ಮಾಡಲಾಗುವುದು.

7. ಜಾಹೀರಾತು ಪ್ರದರ್ಶಿಸಲು ಕನಿಷ್ಠ ಆರು ತಿಂಗಳಿಗೆ ಬಸ್ಸುಗಳನ್ನು ಕಾಯ್ದಿರಿಸಿದಲ್ಲಿ, ತೆರವುಗೊಳಸುವ ವೆಚ್ಚ ಪಾವತಿಯಿಂದ ವಿನಾಯಿತಿ ಇರುತ್ತದೆ.

8. ಜಾಹೀರಾತುಗಳನ್ನು ಪ್ರದರ್ಶಿಸಲು, ಬಸ್ಸಿನ ಕವಚದ ಬಣ್ಣ ಹಾಳಾಗದಂತೆ ಸುಲಭವಾಗಿ ತೆರವುಗೊಳಿಸಲು ಅನುಕೂಲಕರ ಅಂತರ್‌ರಾಷ್ಟ್ರೀಯ ಗುಣಮಟ್ಟದ 3ಒ (90-100 ದಪ್ಪದ) ಸೆಲ್ಫ ಅಡೆಸಿವ್ ವಿನೈಲ್ ಸ್ಟಿಕ್ಕರ್‌ಗಳನ್ನು ಮಾತ್ರ ಬಳಸುವುದು.

9. ಏಜೆನ್ಸಿದಾರರು ತಮ್ಮ ವಹಿವಾಟಿಗೆ ಸಂಬಂಧಿಸಿದ ಸೇವಾ ತೆರಿಗೆ, ಜಾಹೀರಾತು ತೆರಿಗೆ, ಇತರೆ ತೆರಿಗೆಗಳು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ಇತರೆ ಶುಲ್ಕ/ ಮೊತ್ತ, ಸ್ಥಳೀಯ/ ಬಿ.ಬಿ.ಎಂ.ಪಿ/ ಪ್ರಾದೇಶಿಕ ಸಾರಿಗೆ ಪ್ರಾಧೀಕಾರ ಅಥವಾ ಇತರೆ ಪ್ರಾಧೀಕಾರಕ್ಕೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಜಾಹೀರಾತು ಶುಲ್ಕ/ತೆರಿಗೆಗಳನ್ನು ಭರಿಸತಕ್ಕದ್ದು. ಪರವಾನಗಿಯ ಮಧ್ಯಾವಧಿಯಲ್ಲಿ ಜಾಹೀರಾತಿಗೆ ಸಂಬಂಧಿಸಿದ ತೆರಿಗೆಗಳನ್ನು ರಾಜ್ಯ/ಕೇಂದ್ರ/ಸರ್ಕಾರಿ ಅಂಗ ಸಂಸ್ಥೆಗಳು ಹೆಚ್ಚಿಸಿದಲ್ಲಿ, ಹೆಚ್ಚಾದ ಜಾಹೀರಾತು ಶುಲ್ಕಗಳನ್ನು ಏಜೆನ್ಸಿದಾರರು ಪಾವತಿಸತಕ್ಕದ್ದು.

10. ಪರವಾನಗಿ ಶುಲ್ಕದ ಜೊತೆಗೆ ತೆರವುಗೊಳಿಸುವ ವೆಚ್ಚ, ಬಿಬಿಎಂಪಿ ಜಾಹೀರಾತು ತೆರಿಗೆ (ಮಾಸಿಕ ಪ್ರತಿ ಚದರ ಮೀಟರಿಗೆ ರೂ130/- ರಂತೆ) ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧೀಕಾರದಿಂದ ಜಾಹೀರಾತು ಪ್ರದರ್ಶಿಸಲು (ವಾರ್ಷಿಕ ಪ್ರತಿ ಬಸ್ಸಿಗೆ ರೂ.2500/- ರಂತೆ) ಅನುಮತಿ ಶುಲ್ಕಗಳನ್ನು ಮುಂಚಿತವಾಗಿ ಪಾವತಿಸುವುದು.

11. ಎಲ್ಲಾ ಪಾವತಿಗಳನ್ನು "ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಬೆಂ.ಮ.ಸಾ.ಸಂ" , ಬೆಂಗಳೂರು ರವರ ಹೆಸರಿನಲ್ಲಿ ಡಿ.ಡಿ. ಮೂಲಕ ಸಲ್ಲಿಸುವುದು. ಪ್ರಾದೇಶಿಕ ಸಾರಿಗೆ ಪ್ರಾಧೀಕಾರದಿಂದ ಜಾಹೀರಾತು ಪ್ರದರ್ಶಿಸಲು ಅನುಮತಿ ಶುಲ್ಕವನ್ನು ಮಾತ್ರ "ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು" ಇವರ ಹೆಸರಿನಲ್ಲಿ ಪ್ರತಿ ಬಸ್ಸಿಗೆ ಪ್ರತ್ಯೇಕ ಡಿ.ಡಿ. ಮೂಲಕ ಸಲ್ಲಿಸುವುದು.

12. ಜಾಹೀರಾತು ಪ್ರದರ್ಶಿಸಲು ಲಭ್ಯವಿರುವ ಬಸ್‌ಗಳಿಗೆ ಈಗಾಗಲೇ ಒಬ್ಬ ವ್ಯಕ್ತಿ/ ಏಜೆನ್ಸಿಯಿಂದ ಆರ್.ಟಿ.ಓ ಶುಲ್ಕ ಪಾವತಿಸಲ್ಪಟ್ಟು ಅನುಮತಿಯನ್ನು ಪಡೆದಿದ್ದಲ್ಲಿ, ಸದರಿ ಅನುಮತಿ ಅವಧಿ ಒಂದು ವರ್ಷದ ವರವಿಗೂ ಚಾಲ್ತಿಯಲ್ಲಿರುವುದರಿಂದ ಅದೇ ವ್ಯಕ್ತಿ/ ಏಜೆನ್ಸಿಯು ಪುನಃ ಆರ್.ಟಿ.ಓ ಶುಲ್ಕ ಪಾವತಿಸುವ ಅವಶ್ಯಕತೆ ಇರುವುದಿಲ್ಲ.

13. ಜಾಹೀರಾತು ಪ್ರದರ್ಶಿಸಲು ಬಸ್ಸುಗಳನ್ನು ಘಟಕವಾರು. ಲಭ್ಯವಿರುವ ಮಾರ್ಗಗಳನ್ನು ಹಂಚಿಕೆ ಮಾಡಲಾಗುವುದು. ಇದರಲ್ಲಿ ಯಾವುದೇ ನಿಗದಿತ ಕೋರಿಕೆ ಮಾರ್ಗದ ಆಶ್ವಾಸನೆ ನೀಡಲಾಗುವುದಿಲ್ಲ.

14. <u>ಜಾಹೀರಾತು ಪ್ರದರ್ಶಿಸುವ ಜಾಗ:</u> ಸಂಸ್ಥೆಯ ಲೋಗೋ, ವಾಹನದ ನೋಂದಣಿಸಂಖ್ಯೆ ಮತ್ತು ಘಟಕದ ಸಂಖ್ಯೆ ನಮೂದಿಸಲಾಗಿರುವ ಜಾಗಗಳನ್ನು ಹೊರತುಪಡಿಸಿ ಬಸ್ಸಿನ ಎರಡು ಕಡೆಗಳಲ್ಲಿನ ಸಂಪೂರ್ಣ ಕವಚದ ಮೇಲೆ (ಕಿಟಕಿ ಮತ್ತು ಬಾಗಿಲಿನ ಗಾಜುಗಳನ್ನು ಹೊರತುಪಡಿಸಿ) & ಹಿಂಬದಿಯಲ್ಲಿ (ಗಾಜಿನ ಭಾಗವನ್ನು ಹೊರತುಪಡಿಸಿ) ಜಾಹೀರಾತುಗಳನ್ನು ಪ್ರದರ್ಶಿಸಬಹುದಾಗಿರುತ್ತದೆ.

15. ಸಾರ್ವಜನಿಕರಿಗೆ ದಕ್ಕೆಯಾಗುವಂತಹ ಮತ್ತು ಪ್ರಚೋದನಕಾರಿಯಾದಂತಹ ಜಾಹೀರಾತುಗಳನ್ನು ಯಾವುದೇ ವ್ಯಕ್ತಿ /ಏಜೆನ್ಸಿಯು ಪ್ರದರ್ಶಿಸುವಂತಿರುವುದಿಲ್ಲ. ಅಂತಹ ಜಾಹೀರಾತುಗಳನ್ನು ನಿರ್ಭಂದಿಸುವ/ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಹೊಂದಿರುತ್ತದೆ. ಸದರಿ ನಿರ್ಭಂದಿಸಿದ/ ತಿರಸ್ಕರಿಸಿದ ಜಾಹೀರಾತುಗಳಿಂದ ಆಗುವಂತಹ ನಷ್ಟವನ್ನು ತುಂಬಿಕೊಡುವಂತೆ ಏಜೆನ್ಸಿಯು ಕೋರಿಕೆ ಸಲ್ಲಿಸುವಂತಿಲ್ಲ. ಕಾನೂನಿನ ಅಡಿಯಲ್ಲಿ ನಿರ್ಭಂದಿಸಲಾಗಿರುವ ಹೊಗೆಸೊಪ್ಪು, ಮಧ್ಯಪಾನ ವಸ್ತುಗಳು, ಮಾದಕ ವಸ್ತುಗಳು ಹಾಗೂ ಅಸಹ್ಯಕರವಾದ ಇತರೆ ಯಾವುದೇ ಜಾಹೀರಾತುಗಳನ್ನು ಪ್ರದರ್ಶಿಸುವಂತಿರುವುದಿಲ್ಲ.

16. ಘಟಕದಲ್ಲಿ ಬಸ್ಸುಗಳು ಕಾರ್ಯಾಚರಣೆಯಲ್ಲಿರದ ಸಮಯದಲ್ಲಿ ಏಜೆನ್ಸಿಯು ಬಸ್ಸುಗಳ ಮೇಲೆ ಜಾಹೀರಾತುಗಳನ್ನು ಅಳವಡಿಸಬೇಕಾಗಿರುತ್ತದೆ. ಜಾಹೀರಾತು ಪ್ರದರ್ಶಿಸಲೆಂದೇ ಬಸ್ಸುಗಳನ್ನು ಘಟಕದಲ್ಲಿ ಉಳಿಸಿಕೊಳ್ಳುವ ಹಕ್ಕು ಏಜೆನ್ಸಿಗೆ ಇರುವುದಿಲ್ಲ.

17. ಜಾಹೀರಾತು ಪ್ರದರ್ಶಿಸುವ ಮೊದಲು ಜಾಹೀರಾತಿನ ಅಂಶಗಳನ್ನು ಅನುಮೋದನೆಗಾಗಿ ಬೆಂ.ಮ.ಸಾ.ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರಿಗೆ ಸಲ್ಲಿಸಬೇಕಾಗಿರುತ್ತದೆ. ಸಂಸ್ಥೆಯ ಹಾಗೂ ಸಾರ್ವಜನಿಕರ ಹಿತಾಸಕ್ತಿ ದೃಷ್ಟಿಯಿಂದ ಆಕ್ಷೇಪಣೀಯವಾಗಿದ್ದಲ್ಲಿ ಸದರಿ ಜಾಹೀರಾತಿನ ಸಂಪೂರ್ಣ/ ಭಾಗಶಃ ಭಾಗವನ್ನು ತಿರಸ್ಕರಿಸುವ ಹಕ್ಕು ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರಿಗೆ ಇರುತ್ತದೆ.

18. ಜಾಹೀರಾತುಗಳನ್ನು ಕನ್ನಡದಲ್ಲಿಯೂ ಸಹ ತಪ್ಪದೇ ಪ್ರದರ್ಶಿಸತಕ್ಕದ್ದು.

19. ಸಂಪೂರ್ಣ ಜಾಹೀರಾತಿನ ಶೇ10% ರ ಜಾಹೀರಾತು ಭಾಗವು ಸಾರ್ವಜನಿಕ ಹಿತಾಸಕ್ತಿ/ ಅರಿವು ಮೂಡಿಸುವಂತಹ ಅಂಶಗಳನ್ನು ತಪ್ಪದೇ ಪ್ರದರ್ಶಿಸುವಂತಿರತಕ್ಕದ್ದು.

20. ಉಳಿದಂತೆ ಸಂಸ್ಥೆಯ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.

ಸಹಿ/–

**ವ್ಯವಸ್ಥಾಪಕ ನಿರ್ದೇಶಕರು**

**ಬೆಂಮಸಾಸಂ**